ಇಲಾಖೆ / ವಿಷಯ: DEPARTMENT / SUBJECT: ಕರ್ನಾಟಕ ವಿಧಾನ ಸಭೆ

ಪತ್ರಿಕೆಯ ಹೆಸರು : NAME OF THE NEWS PAPER : ಪ್ರಜಾವಾಣಿ

ದಿನಾಂಕ : DATE : 14/07/2019

## ಗ್ರಂಥಾಲಯಗಳ ಪುಸ್ತಕ ಖರೀದಿಯಲ್ಲಿ ಅಕ್ರಮ: ಆರೋಪ

# ಶಾಸಕ ಶಿವನಗೌಡ ನಾಯಕ್ ಖುಲಾಸೆ

ಪ್ರಜಾವಾಣಿ ವಾರ್ತೆ 14/7

ಬೆಂಗಳೂರು: 'ಗ್ರಂಥಾಲಯಗಳ ಪುಸ್ತಕ ಖರೀದಿಯಲ್ಲಿ ಅಕ್ರಮ ನಡೆದಿದ್ದು, ₹ 58 ಲಕ್ಷ ದುರುಪಯೋಗವಾಗಿದೆ' ಎಂಬ ಆರೋಪದಿಂದ ದೇವದುರ್ಗ ವಿಧಾನಸಭಾ ಕ್ಷೇತ್ರದ ಬಿಜೆಪಿ ಶಾಸಕ ಕೆ.ಶಿವನಗೌಡ ನಾಯಕ್ ಖುಲಾಸೆಗೊಂಡಿದ್ದಾರೆ.

ಈ ಕುರಿತಂತೆ ಲೋಕಾಯುಕ್ತ ಪೊಲೀಸರು ದಾಖಲಿಸಿದ್ದ ಖಾಸಗಿ ದೂರನ್ನು 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಾಲಯ'ದ ನ್ಯಾಯಾಧೀಶ ರಾಮಚಂದ್ರ ಡಿ.ಹುದ್ದಾರ ವಜಾಗೊಳಿಸಿದ್ದಾರೆ.

ವಿಚಾರಣೆ ವೇಳೆ ಶಿವನಗೌಡ ನಾಯಕ ಪರ ವಕೀಲ ವಿ.ಕೆ.ಪಾಟೀಲ ಅವರು, 'ಎಲ್ಲ ಪುಸ್ತಕಗಳನ್ನು ಸರ್ಕಾರಿ ಆದೇಶದ ಅನುಸಾರವೇ ಖರೀದಿ ಮಾಡಲಾಗಿದೆ. ವಾರ್ಷಿಕ ಲೆಕ್ಕ ಪರಿಶೋಧನೆ ವರದಿಯಲ್ಲಿ ಅಪರಾತಪರಾ ಆಗಿದೆ ಎಂಬ ಬಗ್ಗೆ ಎಲ್ಲೂ ಉಲ್ಲೇಖವಿಲ್ಲ. ಶಿವನಗೌಡ ಅವರು ಸಚಿವರಾಗುವುದಕ್ಕೂ ಮುನ್ನವೇ ಪುಸ್ತಕ ಆಯ್ಕೆ ಸಮಿತಿ ಇವುಗಳ ಖರೀದಿಗೆ ಶಿಫಾರಸು ಮಾಡಿತ್ತು. ಹೀಗಾಗಿ ಯಾವುದೇ ಅಕ್ರಮ ನಡೆದಿಲ್ಲ' ಎಂದು ವಾದ ಮಂಡಿಸಿದ್ದರು.

ಈ ವಾದಾಂಶ ಮಾನ್ಯ ಮಾಡಿರುವ ನ್ಯಾಯಾಧೀಶರು, 'ದೂರನ್ನು ಪುಷ್ಟೀಕರಿಸುವಂತಹ ಆಧಾರಗಳಿಲ್ಲ' ಎಂಬ ಅಭಿಪ್ರಾಯದೊಂದಿಗೆ ದೂರು ವಜಾಗೊಳಿಸಿ ಆದೇಶಿಸಿದ್ದಾರೆ.

**ಪುಸ್ತಕಗಳು:** 'ಶಿವಕೃಪೆ ಶರಣ ಪಥ', 'ಇತಿಹಾಸ ಮಂಥನ', 'ಇತಿಹಾಸ ಇಂಚರ', 'ಸ್ವರ್ಣಪ್ರಭೆ', 'ಕಸಬಾ ಲಿಂಗಸೂರಿನ ಆದಿ ದೈವ ಶ್ರೀ ಕುಪ್ಪಿಭೀಮ', 'ವಾಲ್ಮೀಕಿ ಮಂದಾರ', 'ವಾಲ್ಮೀಕಿ ಸಮುದಾಯ ಮತ್ತು ಚರಿತ್ರೆ', 'ಏಕಲವ್ಯ', 'ರಾಜಭಕ್ತಿ ಮತ್ತು ಇತರೆ ನಾಟಕಗಳು', 'ಕರ್ನಾಟಕ ನಾಯಕ ಅರಸು ಮನೆತನಗಳ ಸಾಂಸ್ಕೃತಿಕ ಆಚರಣೆಗಳು' ಎಂಬ ಹೆಸರಿನ ಪುಸ್ತಕಗಳನ್ನು 'ನಿಯಮ ಮೀರಿ ಖರೀದಿಸಿ ರಾಜ್ಯದ 5,733 ಗ್ರಂಥಾಲಯಗಳಿಗೆ ವಿತರಿಸಲಾಗಿದೆ' ಎಂದು ಆರೋಪಿಸಲಾಗಿತ್ತು.

### ಪ್ರಕರಣವೇನು?

ರಾಜ್ಯದ ದಿನಪತ್ರಿಕೆಯೊಂದು (ಪ್ರಜಾವಾಣಿ ಅಲ್ಲ) 2010ರ ಆಗಸ್ಟ್ 5ರಂದು, 'ಗ್ರಂಥಾಲಯ ಪುಸ್ತಕ ಖರೀದಿಯಲ್ಲಿ ಖರೀದಿಯಲ್ಲಿ ಭಾವಾವೇಶ' ಎಂಬ ಶೀರ್ಷಿಕೆಯಡಿ ವಿಶೇಷ ವರದಿ ಪ್ರಕಟಿಸಿತ್ತು.

'ಶಿವನಗೌಡ ನಾಯಕ್ ಸಚಿವರಾಗಿದ್ದ 2008ರಿಂದ 2013ರ ಅವಧಿಯಲ್ಲಿ ಪ್ರೊ.ಅಮರೇಶ್ ಯತಗಲ್ (ಶಿವನಗೌಡ ಅವರ ಬಾವ) ಅವರ 10 ಪುಸ್ತಕಗಳನ್ನು ಖರೀದಿಸಲು ಮುಖ್ಯ ಗ್ರಂಥಾಲಯಾಧಿಕಾರಿಗೆ ಅಕ್ರಮವಾಗಿ ಶಿಫಾರಸು ಮಾಡಿದ್ದರು. ಈ ಪ್ರಕ್ರಿಯೆಯಲ್ಲಿ ₹ 58 ಲಕ್ಷ ದುರುಪಯೋಗವಾಗಿದೆ' ಎಂದು ವರದಿಯಲ್ಲಿ ಆರೋಪಿಸಲಾಗಿತ್ತು.

ಇದರ ಅನುಸಾರ ಲೋಕಾಯುಕ್ತ ಪೊಲೀಸರು ಎಸ್.ಬಿ. ಹೊಂಡದಕೇರಿ (ಅಂದಿನ ನಿರ್ದೇಶಕರು-ರಾಜ್ಯ ಗ್ರಂಥಾಲಯ), ಎಂ.ಎನ್.ರಟ್ಟಿಹಳ್ಳಿ (ತೀರಿಕೊಂಡಿದ್ದಾರೆ-ಪ್ರಕರಣ ದಾಖಲಾಗಿದ್ದ ವೇಳೆ ರಾಜಾರಾಂ ಮೋಹನರಾಯ್ ಗ್ರಂಥಾಲಯದ ಮುಖ್ಯ ಗ್ರಂಥಪಾಲಕರಾಗಿದ್ದರು), ಬಿ.ಆರ್.ಹಿರೇಮಠ (ಮುಖ್ಯ ಗ್ರಂಥಪಾಲಕ) ಅಮರೇಶ್ ಯತಗಲ್ (ಲೇಖಕ) ಹಾಗೂ ಶಿವನಗೌಡ ವಿರುದ್ಧ ಸ್ವಯಂ ಪ್ರೇರಿತ ಖಾಸಗಿ ದೂರು ದಾಖಲಿಸಿಕೊಂಡು ತನಿಖೆ ನಡೆಸಿದ್ದರು. 2016–17ರಲ್ಲಿ ಬೆಂಗಳೂರು ಲೋಕಾಯುಕ್ತ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

5